ಸಾಕ್ಷಿಯನ್ನು ದಿಃ 03.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ1 ರಿಂದ 4 ಮತ್ತು 6 ನೇ ಪರ ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ಈ ದಾವೆಯಲ್ಲಿ ನಾನು 11 ನೇ ಪ್ರತಿವಾದಿಯಾಗಿದ್ದು ನನ್ನ ಪ್ರತಿವಾದ ಪತ್ರಕ್ಕೆ ಸಹಿ ಮಾಡಿರುತ್ತೇನೆ. ನಾನು 1 ನೇ ಪ್ರತಿವಾದಿಯವರ ಮಗಳಿಗೆ ಮದುವೆಯಾಗಿರುತ್ತೇನೆ ಎಂದರೆ ಸರಿ. ಈ ದಾವೆಯ ಸಮನ್ಸ್‌ಬಂದ ನಂತರ ನಾನು, 1 ನೇ ಪ್ರತಿವಾದಿ ಹಾಗೂ ಇನ್ನಿತರ ಪ್ರತಿವಾದಿಗಳ ಜೊತೆಗೆ ಒಬ್ಬರೇ ವಕೀಲರನ್ನು ನೇಮಿಸಿಕೊಂಡು ದಾವೆಯನ್ನು ನಡೆಸುತ್ತಿದ್ದೇವು ಎಂದರೆ ಸರಿಯಲ್ಲ. ನಾನು ವಕಲಾತ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೂ ಹಾಗೂ 1 ನೇ ಪ್ರತಿವಾದಿಯವರ ಮಗನಿಗೂ ವೈಮನಸ್ಸು ಉಂಟಾಗಿ ನಾನು ಪ್ರತ್ಯೇಕ ದಾವೆ ನಡೆಸುತ್ತೇನೆ ಎಂದು ಪ್ರತ್ಯೇಕವಾಗಿ ವಕೀಲರನ್ನು ನೇಮಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿ. ಆನಂತರ ನನಗೂ ದಾವ ಆಸ್ತಿಯಲ್ಲಿ ಭಾಗ ಬರಬೇಕು ಎಂದು ಸುಳ್ಳು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಪಟೇಲ್ ಸಿದ್ದೇಗೌಡ ಇವರು ನಾನು ಮದುವೆಯಾಗುವ ಕಾಲಕ್ಕೆ ಇರಲಿಲ್ಲ. ಪಟೇಲ್ ಸಿದ್ದೇಗೌಡ ರವರ ಹೆಂಡತಿ ರಾಮಮ್ಮ ಇವರು ಸಹ ಜೀವಂತವಾಗಿರಲಿಲ್ಲ. ಪಟೇಲ್ ಸಿದ್ದೇಗೌಡ ರವರ ಮೊದಲನೆ ಹೆಂಡತಿ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಪಟೇಲ್ ಸಿದ್ದೇಗೌಡರವರಿಗೆ ಇಬ್ಬರು ಹೆಂಡತಿಯರು ಇದ್ದರೂ ಎಂದು ತೋರಿಸಲು ನಾನಾಗಲೀ ವಾದಿಯವರಾಗಲೀ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮುಂದುವರೆದು ಸಾಕ್ಷಿಯು ದಾಖಲೆಗಳನ್ನು ವಕೀಲರಿಗೆ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಪಟೇಲ್ ಸಿದ್ದೇಗೌಡರವರ ಮೊದಲನೆ ಹೆಂಡತಿಯ ಮಕ್ಕಳು ಎಂದು ಹೇಳಿದ್ದು ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರನ್ನು ಪಕ್ಷಗಾರರನ್ನಾಗಿ ಮಾಡುತ್ತೇವೆ ಎಂದು ಉತ್ತರಿಸಿರುತ್ತಾರೆ. ವಾದಿಯವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.